# ತುಮಕೂರು ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಎಚ್. ರಸ್ತೆ, ತುಮಕೂರು – 572 103**

**ದೂರವಾಣಿ : 0816–2254546 0816–2255596, 0816–2255597 ಫ್ಯಾಕ್ಸ್ : 0816–2270719**


ಸಂಖ್ಯೆ: ತುವಿ/ಸಂ.ವಿ:/2024–25/1395 ದಿನಾಂಕ: 20.01.2025

## ಸುತ್ತೋಲೆ

**ವಿಷಯ:** ಉನ್ನತ ಶಿಕ್ಷಣ ಪರಿಷತ್ತಿನ ವತಿಯಿಂದ **"ಮಾಸಿಕ ಸಂಶೋಧನಾ ಉಪನ್ಯಾಸ ಸರಣಿ" (Monthly Research Lecture Series)** ಕಾರ್ಯಕ್ರಮವನ್ನು ಆಯೋಜಿಸುವ ಕುರಿತು.

**ಉಲ್ಲೇಖ:**
1. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರ ಪತ್ರ ಸಂಖ್ಯೆ: KSHEC/156/Research Lecture Series/2023-24/59 ದಿನಾಂಕ: 17.01.2025.
2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 25.01.2024 (ಕಂಡಿಕೆ–155).

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ವತಿಯಿಂದ ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾನಿಲಯಗಳನ್ನೊಳಗೊಂಡ **"Research Day of Council"** ಎಂಬ ಹೆಸರಿನಲ್ಲಿ ಆನ್‌ಲೈನ್ **"ಮಾಸಿಕ ಸಂಶೋಧನಾ ಉಪನ್ಯಾಸ ಸರಣಿ" (Monthly Research Lecture Series)** ಯನ್ನು ಆಯೋಜಿಸಲು ಉದ್ದೇಶಿಸಲಾಗಿದ್ದು ವಿಶ್ವವಿದ್ಯಾನಿಲಯದ ಅಧ್ಯಾಪಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳು ತಮ್ಮ ಇತ್ತೀಚಿನ ಸಂಶೋಧನೆಗಳ ಬಗ್ಗೆ ಜ್ಞಾನವನ್ನು ಹಂಚಿಕೊಳ್ಳುವುದು ಹಾಗೂ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಇದರ ಉದ್ದೇಶವಾಗಿರುತ್ತದೆ.

ಈ ಸಂಬಂಧ, ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ & ಸಂಶೋಧನಾ ವಿಭಾಗಗಳು ಹಾಗೂ ಘಟಕ ಕಾಲೇಜುಗಳಲ್ಲಿನ ಅಧ್ಯಾಪಕರುಗಳು ಸದರಿ **"ಮಾಸಿಕ ಸಂಶೋಧನಾ ಉಪನ್ಯಾಸ ಸರಣಿ" (Monthly Research Lecture Series)** ಯ ಭಾಗವಾಗಿ ತುಮಕೂರು ವಿಶ್ವವಿದ್ಯಾನಿಲಯದ ವತಿಯಿಂದ ವಿಶೇಷ ಉಪನ್ಯಾಸ ನೀಡಲು ಇಚ್ಛಿಸುವವರು ತಮ್ಮ ಹೆಸರು, ಮೊ.ನಂ, ಇ-ಮೇಲ್ & ಶೀರ್ಷಿಕೆಯನ್ನು ದಿನಾಂಕ: 24.01.2025 ರೊಳಗಾಗಿ ನಿರ್ದೇಶಕರು, ಸಂಶೋಧನಾ ನಿರ್ದೇಶನಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸತಕ್ಕದ್ದು.

ಸದರಿ ಮಾಹಿತಿಯನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಉನ್ನತ ಶಿಕ್ಷಣ ಪರಿಷತ್ತು, ಕರ್ನಾಟಕ ಸರ್ಕಾರ ಇವರಿಗೆ ಕಳುಹಿಸಿಕೊಡಲಾಗುವುದು ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೆ ಪರಿಷತ್ತಿನಿಂದ ಪ್ರಶಂಸಾ ಪತ್ರವನ್ನು ನೀಡಲಾಗುವುದು.

**ಸದರಿ ಉಪನ್ಯಾಸ ಸರಣಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಗಮನಿಸತಕ್ಕದ್ದು.**

- ❖ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ ಅಧ್ಯಾಪಕರು, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಸದರಿ ಉಪನ್ಯಾಸ ಸರಣಿಯಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ತಿಳಿಸಲು ಸೂಚನಾ ಫಲಕದಲ್ಲಿ ಪ್ರಕಟಿಸಿ ಪ್ರಚಾರ ಮತ್ತು ಅರಿವು ಮೂಡಿಸಲು ಕ್ರಮವಹಿಸುವುದು.

ಪು.ತಿ.ನೋ

❖ ಮಾಸಿಕ ಸಂಶೋಧನಾ ಉಪನ್ಯಾಸ ಸರಣಿಯು ಆನ್‌ಲೈನ್ ಉಪನ್ಯಾಸವಾಗಿದ್ದು, ಸದರಿ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವುದು.

❖ ಸದರಿ ಉಪನ್ಯಾಸ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಅಧ್ಯಾಪಕರು, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆ (Feedback) ನ್ನು ಇ-ಮೇಲ್ rameshy@kshec.ac.in ವಿಳಾಸಕ್ಕೆ ಸಲ್ಲಿಸುವುದು.

❖ ಹೆಚ್ಚಿನ ಮಾಹಿತಿಗಾಗಿ **ಡಾ. ವೈ. ರಮೇಶ್**, ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಮೊಬೈಲ್ ಸಂಖ್ಯೆ: 9448357342 ಹಾಗೂ ಇ-ಮೇಲ್- rameshy@kshec.ac.in ಇವರನ್ನು ಸಂಪರ್ಕಿಸುವುದು.

ಆದೇಶದ ಮೇರೆಗೆ,

24/01/25

ನಿರ್ದೇಶಕರು-ಸಂಶೋಧನೆ
ನಿರ್ದೇಶಕರು - ಸಂಶೋಧನೆ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಇವರಿಗೆ,

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಕ್ಷರು/ಸಂಯೋಜಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು)

(ತಮ್ಮ ವಿಭಾಗದಲ್ಲಿನ ಅಧ್ಯಾಪಕರುಗಳು, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ಕಡ್ಡಾಯವಾಗಿ ತರುವುದು)

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕುಲಸಚಿವರ ಆಪ್ತ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ.